

# ಅಧಿಕಾರದ ವ್ಯಾಮೋಹ

ಮಂಜುನಾಥ ಹುಲಕೊಪ್ಪದ

ಉಜ್ಜಯಿನಿ ನಗರದಲ್ಲಿ ವಜ್ರಗುಪ್ತನೆಂಬ ವಜ್ರದ ವ್ಯಾಪಾರಿಯಿದ್ದನು. ವಜ್ರಗುಪ್ತನಲ್ಲಿ ಅಪೂರ್ವವಾದ ವಜ್ರಗಳು ದೊರೆಯುತ್ತಿದ್ದರಿಂದ ರಾಜ ಮಹಾರಾಜರು ಅವನಲ್ಲಿ ವಜ್ರಗಳನ್ನು ಕೊಂಡುಕೊಳ್ಳುತ್ತಿದ್ದರು.

ಒಮ್ಮೆ ವಜ್ರಗುಪ್ತನು ಕ್ರೌಂಚ ದ್ವೀಪದಲ್ಲಿ ಕೋಹಿನೂರ್ ಎಂಬ ವಿಶೇಷವಾದ ವಜ್ರವನ್ನು ಕೊಂಡುಕೊಂಡನು. ಕೋಹಿನೂರ್ ವಜ್ರ ನೋಡಲು ತುಂಬಾ ಸುಂದರವಾಗಿತ್ತು. ಅದನ್ನು ಐವತ್ತು ಲಕ್ಷ ವರಹಗಳಿಗೆ ಮಾರಿ ಲಾಭ ಗಳಿಸಬೇಕೆಂದುಕೊಂಡು ಮನಸ್ಸಿನಲ್ಲೇ ಅಂದುಕೊಂಡು ಅಲ್ಲಿಂದ ತನ್ನ ದೇಶಕ್ಕೆ ಬಂದನು.

ಉಜ್ಜಯಿನಿ ರಾಜನಿಗೆ ವಜ್ರಗುಪ್ತನಲ್ಲಿ ಕೋಹಿನೂರ್ ವಜ್ರ ಇರುವುದು ತಿಳಿಯಿತು. ರಾಜನು ವಜ್ರಗುಪ್ತನನ್ನು ಆಸ್ಥಾನಕ್ಕೆ ಕರೆಸಿ ಅವನಲ್ಲಿರುವ ವಜ್ರವನ್ನು ಪರೀಕ್ಷಿಸಿದನು. ವಜ್ರವನ್ನು ನಾನೇ ಕೊಳ್ಳುತ್ತೇನೆ. ಇಪ್ಪತ್ತೈದು ಲಕ್ಷ ವರಹವನ್ನು ಈ ವಜ್ರಕ್ಕೆ ಕೊಡುತ್ತೇನೆ ಎಂದನು.

ರಾಜನ ಮಾತನ್ನು ಕೇಳಿ ವಜ್ರಗುಪ್ತನಿಗೆ ಏನು ಹೇಳಲು ತೋಚಲಿಲ್ಲ. ತಾನು ಯೋಚಿಸಿದಷ್ಟು ಬೆಲೆ ಸಿಗುತ್ತಿಲ್ಲವಲ್ಲವೆಂದು ಬೇಸರವೂ ಆಯಿತು. ಆದರೆ ರಾಜನಿಗೆ ತನ್ನಲ್ಲಿರುವ ವಜ್ರವನ್ನು ಕಡಿಮೆ ಬೆಲೆಗೆ ಕೊಡುವುದಿಲ್ಲವೆಂದು ಹೇಳಿದರೆ ಕೋಪಿಸಿಕೊಂಡು ತೊಂದರೆ ಕೊಡಬಹುದೆಂದು ಮನಸ್ಸಿನಲ್ಲೇ ಧರ್ಮಸಂಕಟವನ್ನು ಅನುಭವಿಸಿದನು.

ವಜ್ರಗುಪ್ತ ಸುಮ್ಮನೆ ಇರುವುದನ್ನು ನೋಡಿ ರಾಜ ವಜ್ರಕ್ಕೆ ನಾನು ಕಟ್ಟಿದ ದರ ನಿನಗೆ ಹಿಡಿಸಲಿಲ್ಲವೇ? ಏನು ಯೋಚಿಸುತ್ತಿರುವೆ? ಎಂದ.

ಏನು ಇಲ್ಲ ಮಹಾಪ್ರಭುಗಳೇ, ಗ್ರಹ ಪ್ರಭಾವವಿರುವ ವಜ್ರ ಇದು. ಜನ್ಮ ನಕ್ಷತ್ರ ಹೊಂದಿಕೆ ಆದವರಿಗೆ ಮಾತ್ರ ಇದು ಕ್ಷೇಮಕಾರ. ಜನ್ಮ ನಕ್ಷತ್ರ ಇಲ್ಲದಿದ್ದರೆ, ಪ್ರಾಣಕ್ಕೆ ಅಪಾಯ ಉಂಟಾಗುತ್ತದೆ ಅದನ್ನೇ ಯೋಚಿಸುತ್ತಿದ್ದೇನೆ ಎಂದನು ವಜ್ರಗುಪ್ತ.

ವಜ್ರಗುಪ್ತ ತನ್ನಲ್ಲಿ ಸುಳ್ಳು ಹೇಳುತ್ತಿದ್ದಾನೆಂದು ರಾಜ ಗ್ರಹಿಸಿಕೊಂಡನು. ವಜ್ರಗುಪ್ತನಲ್ಲಿ ತನ್ನ ಜನ್ಮ ನಕ್ಷತ್ರವನ್ನು ಹೇಳಿ 'ನನಗೆ ಈ ವಜ್ರದಿಂದ ಏನು ಫಲ ಉಂಟಾಗುತ್ತದೆ ತಿಳಿಸು' ಎಂದನು.

ವಜ್ರಗುಪ್ತ ಕೂಡಲೆ ಮಹಾರಾಜರೇ, ಈ ವಜ್ರ ತಮ್ಮ ಪ್ರಾಣಕ್ಕೆ ಹಾನಿ ತರಬಹುದು. ಇದನ್ನು ನೀವು ಕೊಳ್ಳುವುದು ಒಳ್ಳೆಯದಲ್ಲ. ಇದೇ ಜನ್ಮ ನಕ್ಷತ್ರದ ಇನ್ನೊಬ್ಬ ವರ್ತಕ ಗ್ರಹಗಳ ಕೋಪಕ್ಕೆ ಹೆದರಿ ಈ ವಜ್ರವನ್ನು ಕೊಳ್ಳಲು ನಿರಾಕರಿಸಿದನೆಂದೂ, ಅದರಿಂದ ಉಂಟಾಗುವ ಹಾನಿಯನ್ನು ಉದಾಹರಣೆಯೊಂದಿಗೆ ರಾಜನಿಗೆ ಹೇಳಿದನು.

ರಾಜನಿಗೆ ವಜ್ರಗುಪ್ತನು ಸುಳ್ಳು ಹೇಳುತ್ತಿದ್ದಾನೆ ಎಂದು ತಿಳಿಯಿತು. ಅವನು ನಗುತ್ತಾ ವಜ್ರಗುಪ್ತ, ಏನೇ ತೊಂದರೆ ಬಂದರೂ ಅನುಭವಿಸಲು ಸಿದ್ಧನಾಗಿಯೇ ನಿನ್ನಲ್ಲಿರುವ ವಜ್ರವನ್ನು ಕೊಂಡುಕೊಳ್ಳುತ್ತಿದ್ದೇನೆ. ನೀನು ನಿಶ್ಚಿಂತೆಯಿಂದ ವಜ್ರವನ್ನು ನನಗೆ ಕೊಡು ಎಂದನು.

ವಜ್ರಗುಪ್ತನು ರಾಜನ ಮಾತಿಗೆ ಮರು ಮಾತನಾಡದೆ ಕೋಹಿನೂರ್ ವಜ್ರವನ್ನು ರಾಜನಿಗೆ ಮಾರಿ ಇಪ್ಪತ್ತೈದು ಲಕ್ಷ ವರಹವನ್ನು ತೆಗೆದುಕೊಂಡು ಅಲ್ಲಿಂದ ಹೊರಟನು.

ಅರಮನೆಯಲ್ಲಿ ನಡೆದ ಎಲ್ಲ ವಿಷಯ ಯುವರಾಜನಾದ ಪ್ರಸೇನನಿಗೆ ತಿಳಿಯಿತು. ಅವನು ಸೂಕ್ಷ್ಮಬುದ್ಧಿಯವನಾದರೂ ದುಷ್ಟ ಗುಣಗಳನ್ನು ಹೊಂದಿದ್ದನು. ಆತ ವಜ್ರಗುಪ್ತನನ್ನು ಗುಟ್ಟಾಗಿ ಭೇಟಿ ಮಾಡಿ ವಜ್ರಗುಪ್ತ, ನಿಮ್ಮಲ್ಲಿರುವ ಬೆಲೆ ಬಾಳುವ ವಜ್ರವನ್ನು ರಾಜರು ಅಗ್ಗದ ಬೆಲೆಗೆ ಕೊಂಡುಕೊಂಡರು ಅಲ್ಲವೇ? ನಿಮ್ಮ ಮನಸ್ಸು ಒಪ್ಪದೇ ಸುಳ್ಳನ್ನು ಹೇಳಬೇಕಾಗಿ ಬಂದಿತು ನಿಜವೇ? ನೀವು ರಾಜರಿಗೆ ಭಯಪಡಿಸಿದ್ದು ಒಂದು ರೀತಿಯಲ್ಲಿ ನನಗೆ ಒಳಿತೇ ಆಯಿತು. ನೀವು ನನಗೊಂದು ಚಿಕ್ಕ ಸಹಾಯ ಮಾಡಿದರೆ ನಿಮ್ಮ ವಜ್ರ ನಿಮಗೇ ಹಿಂದಿರುಗಿ ಸಿಗುತ್ತದೆ. ಅದಕ್ಕಾಗಿ ನೀವು ರಾಜನಲ್ಲಿ ಪಡೆದುಕೊಂಡ ಹಣವನ್ನು ಹಿಂದಿರುಗಿಸಬೇಕಾಗಿಯೂ ಇಲ್ಲ. ನೀವು ನಾನು ಹೇಳಿದಂತೆ ಮಾಡಿದರೆ ಸಾಕು ಎಂದನು.

ವಜ್ರಗುಪ್ತನು 'ಅದೇನು ಹೇಳಿ?' ಎಂದನು.

ರಾಜರು ಇನ್ನೂ ಆರೋಗ್ಯವಾಗಿದ್ದಾರೆ. ಅವರು ಬೇಗ ಸಾಯುವ ಹಾಗೆ ಕಾಣುತ್ತಿಲ್ಲ. ನನಗೆ ಬೇಗ ಸಿಂಹಾಸನ ಸಿಗುವುದಿಲ್ಲ. ಅದಕ್ಕಾಗಿ ಯಾವುದಾದರೂ ಉಪಾಯವನ್ನು ಮಾಡಿ ರಾಜರನ್ನು ಸಾಯಿಸಿ ಬಿಟ್ಟರೆ ನೀವು ಅವರಲ್ಲಿ ವಜ್ರದ ಬಗ್ಗೆ ಹೇಳಿರುವ ಸುಳ್ಳು ಸತ್ಯವಾಗಿ ಬಿಡುತ್ತದೆ. ನಿಮ್ಮಲ್ಲಿ ವಜ್ರದ ಪುಡಿಯಿದ್ದರೆ ನನಗೆ ಕೊಡಿ. ಅದನ್ನು ಆಹಾರದಲ್ಲೋ ಹಾಲಿನಲ್ಲೋ ಬೆರೆಸಿ